ಸಿ.ಸಿ.ಸಂಖ್ಯೆ: 381/2023 ಚಾಸಾ–01

ಫ್ರಾಸಾ–01

**ದಿನಾಂಕ: 30.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:–**

ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯ ಮತ್ತು ವ್ಯಾಪಾರ ಮಾಡುತ್ತೇನೆ. ನಾನು ಪರ್ಟಿಲೈಸರ್ಸ್ ವ್ಯಾಪಾರ ಮಾಡುತ್ತೇನೆ. ನನ್ನ ಅಂಗಡಿಯಲ್ಲಿ ಟ್ರಾಕ್ಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ಮಾರಾಟ ಮಾಡುವುದಿಲ್ಲ ಎಂದರೆ ಸರಿ. ಆರೋಪಿ ಕಳೆದ 10 ವರ್ಷಗಳಿಂದ ನನ್ನ ಅಂಗಡಿಯಲ್ಲಿ ರಸಗೊಬ್ಬರವನ್ನು ಖರೀದಿ ಮಾಡುತ್ತಿದ್ದರು ಎಂದರೆ ಸರಿ. ಟ್ರಾಕ್ಟರ್ ಮತ್ತು ಇತರ ಉಪಕರಣಗಳನ್ನು ಖರೀದಿ ಮಾಡಲು ಸರ್ಕಾರದಿಂದ ಸಹಾಯ ಧನ ನೀಡುತ್ತಾರೆ ಎಂದರೆ ಸರಿ. ಆರೋಪಿಗೆ ನಗದು ರೂಪದಲ್ಲಿ ಸಾಲ ನೀಡಿದ್ದೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ ಎಂದರೆ ಸರಿ. ಅದರಲ್ಲಿ ನಾನು ಸಾಲ ನೀಡಿರುವ ಬಗ್ಗೆ ನಮೂದು ಮಾಡಬೇಕು ಎಂದರೆ ಸರಿ. ನನ್ನ ಆದಾಯ ತೆರಿಗೆಯಲ್ಲಿ ಆರೋಪಿಗೆ ನೀಡಿರುವ ಸಾಲದ ಬಗ್ಗೆ ನಮೂದು ಮಾಡಿಲ್ಲ. ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ಕನ್ನಡದಲ್ಲಿ ಸಹಿ ಮಾಡುವುದನ್ನು ಬಿಟ್ಟರೆ ಆತನಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ1 ರ ಒಕ್ಕಣಿಕೆಗಳನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರ ಮತ್ತು ಚೆಕ್ಕಿನಲ್ಲಿ ಕಾಣುವ ಅಕ್ಷರಗಳು ಒಂದೇ ರೀತಿ ಇವೆ ಎಂದರೆ ಸರಿಯಲ್ಲ.

ಆರೋಪಿ ನಮ್ಮ ಅಂಗಡಿಯಲ್ಲಿ ರಸಗೊಬ್ಬರ ಖರೀದಿ ಮಾಡುತ್ತಿದ್ದು ಅದರ ಭದ್ರತೆಗಾಗಿ ನಿಪಿ1 ನ್ನು ನೀಡಿದ್ದು, ಅದನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ರಸಗೊಬ್ಬರದ ಬಾಬ್ತು ಆರೋಪಿ ನನಗೆ ರೂ.20,000/– ನೀಡಬೇಕಿತ್ತು ಎಂದರೆ ಸರಿಯಲ್ಲ. ಆರೋಪಿಯು ತನ್ನ ಟ್ರಾಕ್ಟರ್ ನಿಂದ ನಮ್ಮ ಜಮೀನನ್ನು ಉಳುಮೆ ಮಾಡಿದ್ದು ಅದರ ಬಾಬ್ತು ರೂ.60,000/– ಗಳನ್ನು ನಾನೇ ಆರೋಪಿಗೆ ಕೊಡಬೇಕು ಎಂದರೆ ಸರಿಯಲ್ಲ. ಆರೋಪಿ ನನ್ನ ಜಮೀನನ್ನು ಸುಮಾರು 10 ವರ್ಷಗಳಿಂದಲೂ ಉಳುಮೆ ಮಾಡುತ್ತಿದ್ದಾರೆ. ತತ್‌ಕ್ಷಣದಲ್ಲಿ ನಾನು

ಆರೋಪಿಗೆ ಟ್ರಾಕ್ಟರ್ ಬಾಡಿಗೆಯನ್ನು ಕೊಡುತ್ತಿರಲಿಲ್ಲ, ಕೆಲವು ದಿನಗಳ ನಂತರ ಬಾಡಿಗೆ ಪಾವತಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸೆಪ್ಟೆಂಬರ್–2019 ರಂದು ನಾನು ಆರೋಪಿಗೆ ಸಾಲ ನೀಡಿದ್ದೆ. ದಿಃ 04.09.2020 ರಂದು ಆರೋಪಿಗೆ ನೋಟೀಸ್ ನೀಡಿದ್ದೆ.

ನೋಟೀಸ್ ನೀಡಿದ ನಂತರ ಆರೋಪಿಯನ್ನು 2–3 ಬಾರಿ ಭೇಟಿ ಮಾಡಿದ್ದೆ. ನೋಟೀಸ್ ನೀಡಿದ 10 ದಿನಗಳ ಅಂತರದಲ್ಲಿ ಆರೋಪಿಯನ್ನು ಭೇಟಿ ಮಾಡಿದ್ದೆ. ಆರೋಪಿ ತನ್ನ ಬಾಬ್ತು ರೂ.20,000/– ಹಣವನ್ನು ನನಗೆ ಪಾವತಿಸಿರುವ ಕಾರಣ ನಾನು ನಿಗಧಿತ ಸಮಯದಲ್ಲಿ ದೂರನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನೋಟೀಸ್ ನೀಡಿದ 2 ತಿಂಗಳ ನಂತರ, 10 ದಿನದ ಒಳಗಾಗಿ ಸಾಲ ಮರುಪಾವತಿ ಮಾಡುತ್ತೇನೆ ಎಂದು ಆರೋಪಿ ಹೇಳಿದ ಬಗ್ಗೆ ಬರವಣಿಗೆ ಆಗಿಲ್ಲ. ನಿಗಧಿತ ಅವಧಿಯಲ್ಲಿ ದೂರನ್ನು ದಾಖಲಿಸದ ಕಾರಣ ಈ ದೂರು ಊರ್ಜಿತವಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೆ ಸಾಲ ಪಾವತಿ ಮಾಡಲು ಭಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ರೂ.500/– ಮುಖ ಬೆಲೆಯ 800 ನೂರು ನೋಟುಗಳನ್ನು ಆರೋಪಿಗೆ ನೀಡಿದ್ದೆ. ಆರೋಪಿ ಅನಕ್ಷರಸ್ಥರಾದ ಕಾರಣ ಅಕ್ರಮ ಲಾಭ ಪಡೆಯಲು ಈ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಗುಂಡ್ಲುಪೇಟೆ**